

ಮಾಡಲಾಗದ ಹತಾಶಭಾವ ಜನರಲ್ಲಿ ಆಗಾಧ ಖಿನ್ನತೆ ಹುಟ್ಟಿಸಿತ್ತು. ಸುತ್ತಲೂ ಹರಡಿದ ಮೌನ ಜನರ ಜೀವ ಹಿಂಡುತ್ತಿತ್ತು. ತಮ್ಮ ದೇಹದಲ್ಲಿ ಜೀವ ಇನ್ನೂ ಇದೆ ಎಂಬಂತೆ ಅವರು ಮಾತನಾಡಬೇಕಾಗಿತ್ತು. ಹೀಗಾಗಿ ನೆರೆದ ಜನರು ಮೆಲ್ಲನೆ ತಂತಮ್ಮಲ್ಲಿ ಮಾತಿಗಿಳಿದರು:

'ಮಂತ್ರಿಗಳು ಹೀಗೇಕೆ ಮಾಡಿಕೊಂಡರು? ಇಂಥ ಅನಾಹುತ ಮಾಡಿಕೊಳ್ಳಲು ಅವರಿಗೇನು ಕೊರತೆಯಿತ್ತು? ಮಂತ್ರಿಗಳು ಇಂಥ ನಿರ್ಣಯ ತೆಗೆದುಕೊಳ್ಳಲು ಏನು ಕಾರಣ ಇರಬೇಕು? ದೇವರೆ, ಅವರ ಆತ್ಮಕ್ಕೆ ಶಾಂತಿ ನೀಡು. ಅವರ ಆತ್ಮದ ಅವಸಾನ ತಪ್ಪಿಸು' ಎಂದು ಒಬ್ಬ ವೃದ್ಧ ತನ್ನ ಪಕ್ಕದಲ್ಲಿ ಅನ್ಯ ಮನಸ್ಕನಾಗಿ ಜನರ ಚಲನ-ವಲನ ನೋಡುತ್ತ, ಅವರ ಆಕ್ರಂದನ ಕೇಳುತ್ತ ನಿಂತ ಯುವಕನಿಗೆ ಹೇಳಿದ. ವೃದ್ಧನ ಮಾತು ಯುವಕನಿಗೆ ಇಷ್ಟವಾಗಲಿಲ್ಲ. ನೆರೆದ ಸಾವಿರಾರು ಜನರಲ್ಲಿ ಭಾವಾವೇಶಕ್ಕೆ ಒಳಗಾಗದ, ಕಣ್ಣೀರು ಸುರಿಸದ ಏಕೈಕ ವ್ಯಕ್ತಿ ಎಂದರೆ ಈ ತರುಣನೇ. ಹೀಗಾಗಿ ವೃದ್ಧನ ಮುಖ ತಿಂದು ಹಾಕುವಂತೆ ನೋಡಿದ ಯುವಕ, 'ಅಜ್ಜ, ಅವನು ಮಂತ್ರಿ. ಅವನು ಜನರಿಗಾಗಿ ಬದುಕಿರಲಿಲ್ಲ. ತನಗಾಗಿ, ಕೇವಲ ತನಗಾಗಿ ಬದುಕಿದವ. ಅವನು ಏನು ಮಾಡಿದನೆಂದು ನಿಮಗೆ ಗೊತ್ತೆ? ಅವನು ಜನರಿಗೆ ಹೇಳಿದ್ದು ಒಂದು, ಮಾಡಿದ್ದು ಮತ್ತೊಂದು. ಅವನು ಸಂತನೂ ಅಲ್ಲ, ಶರಣನೂ. ಅವನ ಸಾವಿಗೆ ಹೀಗೆ ಕಣ್ಣೀರು ಸುರಿಸುವ ನಿಮ್ಮನ್ನು ಕಂಡು ನನಗೆ ಅಯ್ಯೋ ಪಾಪ ಎನಿಸಿತು. ಈ ದೇಶದಲ್ಲಿ ಒಬ್ಬ ಖಳನಿಗೆ ನಾಯಕನ ಪಟ್ಟ ಕಟ್ಟಲಾಗುತ್ತಿದೆ. ವಿಚಿತ್ರ ದೇಶ, ವಿಚಿತ್ರ ಜನ' ಎಂದು ಹೇಳಿ ದೀರ್ಘ ನಿಟ್ಟುಸಿರು ಬಿಟ್ಟು ಜನರನ್ನು ದೂಡಿಕೊಂಡು ಮುಂದೆ ಹೋದ.

ಯುವಕನ ಮಾತು ವೃದ್ಧನಿಗೆ ಹಿಡಿಸಲಿಲ್ಲ. ಆದರೆ, ಅವನ ಮಾತಿಗೆ ಪ್ರತಿಕ್ರಿಯೆ ನೀಡುವ ಸಾಹಸವನ್ನೂ ಮಾಡಲಿಲ್ಲ. 'ಈ ಕಾಲದ ಹುಡುಗರೇ ಹೀಗೆ. ಹಿರಿಯರಿಗೆ, ಒಳ್ಳೆಯವರಿಗೆ ಗೌರವ ಕೊಡುವುದಿಲ್ಲ. ತಾವೇ ಬುದ್ಧಿವಂತರು, ತಮಗೇ ಎಲ್ಲಾ ಗೊತ್ತಿದೆ ಎಂಬ ದುರಹಂಕಾರ ಅವರಿಗೆ' ಎಂದು ತನ್ನಷ್ಟಕ್ಕೆ ಅಂದುಕೊಂಡು ತನ್ನ ದುಃಖ ಆಲಿಸಲು ಯಾರಾದರೂ ಸಿಗಬಹುದೆ ಎಂದು ಬೇರೆಯವರನ್ನು ಹುಡುಕಿಕೊಂಡು ನೆರೆದ ಜನರ ಮುಖ ನೋಡುತ್ತ ಮಂತ್ರಿಯ ಮನೆಯ ಕಿಟಕಿಯ ಹತ್ತಿರ ಹೋಗಿ ತೆರೆದ ಕಿಟಕಿಯಿಂದ ಒಳಗೆ ಇಣುಕಿದ.

ವಿಶಾಲವಾದ ಕೋಣೆಯಲ್ಲಿ ಮಂಚದ ಮೇಲೆ ಮಂತ್ರಿಯ ಶವ ಬಿದ್ದಿತ್ತು. ಸುತ್ತಲೂ ಅವರ ಪತ್ನಿ, ಮಕ್ಕಳು, ಬಂಧು-ಭಗಿನಿಯರು ಕುಳಿತು ಕಣ್ಣೀರು ಸುರಿಸುತ್ತಿದ್ದರು. ಶವವನ್ನು ಮಂಚದಿಂದ ಬೇರೆ ಕಡೆಗೆ ಸ್ಥಳಾಂತರಿಸಿರಲಿಲ್ಲ. ಏಕೆಂದರೆ ಇದು ಸಹಜ ಸಾವು ಆಗಿರಲಿಲ್ಲ. ಮಂತ್ರಿಗಳು ಹಣೆಗೆ ಗುಂಡಿಕ್ಕಿಕೊಂಡು ಇಹಲೋಕ ತ್ಯಜಿಸಿದ್ದರು. ಹೀಗಾಗಿ ಮಂತ್ರಿಯ ಶವ ಮುಟ್ಟುವ ಸಾಹಸ ಯಾರೂ ಮಾಡಿರಲಿಲ್ಲ. ಪಿ.ಎಸ್.ಐ. ಮತ್ತು ಎಸ್.ಪಿ. ಬಂದು ಮಂತ್ರಿಯ ಮಗನ ಜೊತೆ ಸಮಾಲೋಚನೆ ನಡೆಸಿದರು. ಮಂತ್ರಿಯ ಆತ್ಮಹತ್ಯೆಗಿರುವ ಕಾರಣಗಳು ಯಾರಿಗೂ ಗೊತ್ತಿರಲಿಲ್ಲ. ಶವದ ಮರಣೋತ್ತರ ಪರೀಕ್ಷೆಗಾಗಿ ಶವವನ್ನು ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಬೇಕೋ ಅಥವಾ ಸರ್ಕಾರಿ ವೈದ್ಯರನ್ನು ಇಲ್ಲಿಗೇ ಕರೆಸಿ ಮಂತ್ರಿಯ ಮನೆಯಲ್ಲಿಯೇ ಮರಣೋತ್ತರ ಪರೀಕ್ಷೆ ಮಾಡಿಸಬೇಕೋ ಎಂದು ಕುಟುಂಬದ ಸದಸ್ಯರು ಅಧಿಕಾರಿಗಳ ಜೊತೆ ಚರ್ಚೆ ನಡೆಸಿದ್ದರು.

ನಡುರಾತ್ರಿಯಲ್ಲಿ ಮಂತ್ರಿ ತನ್ನ ತಲೆಗೆ ಗುಂಡಿಕ್ಕಿಕೊಂಡು ಕತ್ತಲು ಗುಹೆ ಸೇರಿದ ವಿಷಯ ಗೊತ್ತಾಗಿ ನಗರದ ಮೂಲೆ ಮೂಲೆಗಳಿಂದ ಜನರು ತಂಡೋಪತಂಡವಾಗಿ ಬಂದು ಮಂತ್ರಿಯ ಮನೆಯ ಮುಂದೆ ನೆರೆದಿದ್ದರು. ಪತ್ರಿಕೆಯವರು, ವಿದ್ಯುನ್ಮಾನ ಮಾಧ್ಯಮದವರು, ಪಕ್ಷದ ಕಾರ್ಯಕರ್ತರು ಧಾವಿಸಿ ಬಂದರು. ಮಂತ್ರಿ ಸತ್ತದ್ದಕ್ಕಾಗಿ ಅವರ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಲು ಬಂದವರು ಕಡಿಮೆ. ಮಂತ್ರಿ ಏಕೆ ಆತ್ಮಹತ್ಯೆ ಮಾಡಿಕೊಂಡ? ದೊಡ್ಡವರ ಆತ್ಮಹತ್ಯೆಗೆ ಬಹುದೊಡ್ಡ ಕಾರಣಗಳೇ ಇರಬೇಕು. ಹಾಗಾದರೆ ಆ ಕಾರಣಗಳಾವವು? ಎಂದು ಮಂತ್ರಿಗಳ